**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1902/2025**

| | | |
|---|---|---|
| ಸಾಕ್ಷಿದಾರರ ಹೆಸರು | : ನಿಖಿತ | ಪ್ರಾಸಾ-12 |
| ತಂದೆಯ ಹೆಸರು | : ವೆಂಕಟೇಶ್ | ಚಾಸಾ-6 |
| ವಯಸ್ಸು | : 28 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಪರಾಧ ಸ್ಥಳ ಪರಿಶೀಲನ ಅಧಿಕಾರಿ | ದಿನಾಂಕಃ 07.07.2026. |
| ವಾಸಸ್ಥಳ | : ಚಿಕ್ಕಮಗಳೂರು | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.13.06.2023 ರಿಂದ ಇಲ್ಲಿಯವರೆಗೂ ಚಿಕ್ಕಮಗಳೂರಿನಲ್ಲಿ ಅಪರಾಧ ಸ್ಥಳ ಪರಿಶೀಲನ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.03.02.2025 ರಂದು ನಿಯಂತ್ರಣ ಕೊಠಡಿಯಿಂದ ನಮಗೆ ಬಂದ ಮಾಹಿತಿಯ ಮೇರೆಗೆ ನಾವು ಕಳಸ ಪೋಲಿಸ್ ಠಾಣೆಗೆ ಭೇಟಿ ನೀಡಿರುತ್ತೇವೆ. ನಂತರ ಪ್ರಕರಣದ ಐ.ಓ. ನಮ್ಮನ್ನು ಘಟನಾ ಸ್ಥಳವಾದ ಆರೋಪಿಯ ಕಾಫೀ ತೋಟಕ್ಕೆ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ. ನನ್ನೊಟ್ಟಿಗೆ ಚಾಸಾ-7 ಮತ್ತು 8 ರವರು ಬಂದಿದ್ದು, ಐ.ಓ. ರವರ ಮಾಹಿತಿಯ ಮೇರೆಗೆ ನಾವು ಕೃತ್ಯ ನಡೆದ ಸ್ಥಳವನ್ನು ಪರೀಕ್ಷಿಸಲಾಗಿ ಕಲ್ಲುಗಳ ಮೇಲೆ ರಕ್ತದ ಕಣಗಳು ಇದ್ದು, ಅವುಗಳನ್ನು ಸಂಗ್ರಹಿಸಿ ನೀಡಿರುತ್ತೇವೆ. ಸದರಿ ಪ್ರಕ್ರಿಯೆಯನ್ನು ಮ.2.20 ರಿಂದ 3.20 ರವರೆಗೆ ಕೈಗೊಳ್ಳಲಾಗಿರುತ್ತದೆ. ನಾವು ಸಂಗ್ರಹಿಸಿ ಕೊಟ್ಟ ನಂತರ ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತಾರೆ.

ಸಾಕ್ಷಿಯು ನಿಪಿ-5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಎಂ.ಒ.7 ನ್ನು ನೋಡಿ ಗುರುತಿಸಿದ್ದು ಮತ್ತು ಎಂ.ಒ.6 ರ ಮೇಲೆ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಎಂ.ಒ.6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ದಿ.03.02.2025 ರಂದು ದೂರವಾಣಿಯ ಮುಖಾಂತರ ನಮಗೆ ಮಾಹಿತಿ ಬಂದಿರುತ್ತದೆ. ನಾವು ಸ್ಥಳಕ್ಕೆ ಹೋದ ಜಾಗವು ಆರೋಪಿಗೆ ಸೇರಿದ್ದಾಗಿರುತ್ತದೆ ಎಂದು ಐ.ಓ. ರವರು ತಿಳಿಸಿರುತ್ತಾರೆ. ಐ.ಓ. ಹೇಳಿರವ ಅಂಶವು ಸರಿಯೋ ತಪ್ಪೋ ಎಂದು ನಾನು ಕಂದಾಯ ದಾಖಲಾತಿಗಳನ್ನು ನೋಡಿ ಪರಿಶೀಲಿಸಿರುವುದಿಲ್ಲ. ಸಾಮಾನ್ಯವಾಗಿ ಒಂದು ವಸ್ತುವನ್ನು ಬಿಳಿಯ ಬಟ್ಟೆಯಲ್ಲಿ ಸುತ್ತಿ ತೋರಿಸಿದ್ದಲ್ಲಿ ಅದನ್ನು ಗುರುತಿಸಲು ಸಾದ್ಯವಿಲ್ಲ ಎಂದರೆ ಸರಿ. ನಾನು ಸಂಗ್ರಹಿಸಿದ ಕಲ್ಲನ್ನು ಫೋಟೋದಲ್ಲಿ ಕಾಣುವ ಹಾಗೆ ಫೋಟೋಗಳನ್ನು ತೆಗೆದಿರುತ್ತಾರೆ. ಆ ರೀತಿಯಾಗಿ ಫೋಟೋಗಳನ್ನು ನಾನು ಈ ದಿನ ನ್ಯಾಯಾಲಯದಲ್ಲಿ ಗುರುತಿಸಿರುವುದಿಲ್ಲ ಎಂದರೆ ಸರಿ. ನಿಪಿ-5 ರಲ್ಲಿ ನಾನು ಸಂಗ್ರಹಿಸಿ ನೀಡಿದ ಕಲ್ಲುಗಳು ಕಂಡುಬರುತ್ತಿಲ್ಲ ಎಂದರೆ ಸರಿ. ನಾನು ಒಟ್ಟು 5 ಕಲ್ಲುಗಳನ್ನು ಸಂಗ್ರಹ ಮಾಡಿ ನೀಡಿರುತ್ತೇನೆ. ಸದರಿ 5 ಕಲ್ಲುಗಳ ಮೇಲೂ ರಕ್ತದ ಕಲೆ ಇತ್ತು. ನಾನು ಸಂಗ್ರಹಿಸಿದ ಕಲ್ಲುಗಳ ಮೇಲೆ ಇದ್ದ ರಕ್ತದ ಕಲೆಯು ಎಷ್ಟು ದಿನದ ವರೆಗೂ ಇರಬಹುದು ಎಂಬುದರ ಬಗ್ಗೆ ನಾನು ನೇರವಾಗಿ ಉತ್ತರಿಸಲು ಸಾದ್ಯವಾಗುವುದಿಲ್ಲ ಮತ್ತು ಸದರಿ ಕೃತ್ಯವು ಹೊರ ಜಾಗದಲ್ಲಿ ಸಂಭವಿಸಿರುತ್ತದೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಭೇಟಿ ನೀಡಿದ ದಿನ ಮಳೆ ಇರುವುದಿಲ್ಲ. ಎಂ.ಒ.7 ರ ಮೇಲೆ ಯಾವುದೇ ರಕ್ತದ ಕಲೆಗಳು ಕಂಡುಬರುತ್ತಿಲ್ಲ.

ಸಾಕ್ಷಿಯು ಮುಂದುವರೆದು ನಾವು ಪರೀಕ್ಷಿಸುವ ಸಮಯದಲ್ಲಿ ರಕ್ತದ ಕಲೆಗಳು ಇದ್ದವು ಅದು ದಿನಗಳು ಕಳೆದಂತೆ ಕಲ್ಲಿನ ಬಣ್ಣವಾಗಿ ತಿರುಗುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕಾಫೀ ತೋಟದಲ್ಲಿ ಹಲವು ಕಾರಣದಿಂದಾಗಿ ರಕ್ತ ಬರುತ್ತದೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1902/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಪೂರ್ಣೇಶ್ ಎಂ.ಡಿ | ಪ್ರಾಸಾ-13 |
| ತಂದೆಯ ಹೆಸರು | : ದೇವೇಗೌಡ | ಚಾಸಾ-21 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ 07.07.2026. |
| ವಾಸಸ್ಥಳ | : ಕಳಸ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ಫೆಬ್ರವರಿ 2024 ರಿಂದ ಇಲ್ಲಿಯವರೆಗೂ ಕಳಸ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.01.02.2025 ರಂದು ಬೆ.7.30 ರ ಸಮಯಕ್ಕೆ ಚಾಸಾ-24 ರವರ ಆದೇಶದ ಮೇರೆಗೆ ಮಂಗಳೂರು ಎ.ಜೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡು ಬಂದು, ನಮ್ಮ ಠಾಣಾ SHO ಆಗಿ ಕರ್ತವ್ಯದಲ್ಲಿ ಇದ್ದ ಸತೀಶ್ ರವರಿಗೆ ರಾ.9.30 ರ ಸಮಯಕ್ಕೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಆರ್.ಎಸ್. ವಕೀಲರಿಂದ ಶ್ರೀ ಎಂ.ವಿ.ಜೆ. ವಕೀಲರ ಪರವಾಗಿಃ**

ದಿ.01.02.2025 ರಂದು ನಾನು ಮಂಗಳೂರಿನ ಎ.ಜೆ. ಆಸ್ಪತ್ರೆಗೆ ಹೋಗಿರುತ್ತೇನೆ. ನಿಪಿ-1 ನ್ನು ನಾನೇ ಬರವಣಿಗೆ ಮಾಡಿಕೊಂಡಿರುತ್ತೇನೆ. ನಿಪಿ-1 ರಲ್ಲಿ ಸ್ಥಳವನ್ನು ನಮೂದಿಸಿರುತ್ತೇನೆ. ನಿಪಿ-1 ರಲ್ಲಿ ಸ್ಥಳದ ಬಗ್ಗೆ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ರಾ.9.10 ರ ಸಮಯಕ್ಕೆ ನಿಪಿ-1 ನ್ನು SHO ಗೆ ನೀಡಿರುತ್ತೇನೆ. ನಿಪಿ-1 ರಂತೆ ನಾನು ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.